# ದೇಶಕ್ಕೆಲ್ಲ ಒಂದೇ ಚುನಾವಣೆ

ದೇಶಕ್ಕೆ ಒಂದೇ ಬಾರಿ ಚುನಾವಣೆ ನಡೆಸುವ ವಿಚಾರ ಈಗ ಎಲ್ಲ ಕಡೆ ಚರ್ಚೆಗೆ ಬಂದಿದೆ. ಇದು ಮುಕ್ತವಾಗಿ ಪಕ್ಷಾತೀತವಾಗಿ ಎಲ್ಲ ರಂಗಗಳಲ್ಲಿ ಚರ್ಚೆಯಾಗಬೇಕು. ಗ್ರಾಮ ಪಂಚಾಯ್ತಿಯಿಂದ ಹಿಡಿದು ಸಂಸತ್ತಿನವರೆಗೆ ಒಂದೇ ಚುನಾವಣೆ ನಡೆದರೆ ಹಣ ಮತ್ತು ಸಮಯ ಉಳಿತಾಯವಾಗುತ್ತದೆ ಎಂದು ಎಲ್ಲರೂ ಹೇಳಿದ್ದಾರೆ. ಚುನಾವಣೆ ಆಯೋಗ ಕೂಡ ಒಂದೇ ಚುನಾವಣೆ ಪರಧ್ವನಿ ಎತ್ತಿದೆ. ಮತದಾರರ ಪಟ್ಟಿಯನ್ನು ಒಮ್ಮೆ ಸಿದ್ಧಪಡಿಸಿದರೆ ಸಾಕು. ಅದರಲ್ಲಿ ಗ್ರಾಮ ಪಂಚಾಯ್ತಿಯಿಂದ ಸಂಸತ್‌ವರೆಗೆ ಚುನಾವಣೆ ನಡೆಸಬಹುದು. ಪ್ರತಿ 5 ವರ್ಷಕ್ಕೊಮ್ಮೆ ಮಾತ್ರ ಚುನಾವಣೆ ನಡೆಸಬೇಕು. ಮಧ್ಯಂತರದಲ್ಲಿ ಸರ್ಕಾರ ಬಿದ್ದರೆ ಪರ್ಯಾಯ ಸರ್ಕಾರ ರಚನೆ ಕಡ್ಡಾಯ. ರಾಷ್ಟ್ರಪತಿ ಆಳ್ವಿಕೆಗೆ ಅವಕಾಶವಿಲ್ಲ.

ಇಂಥ ವಿಚಾರದ ಬಗ್ಗೆ ಕರ್ನಾಟಕದ ವಿಧಾನಮಂಡಲದಲ್ಲಿ ಚರ್ಚೆ ನಡೆಯಬೇಕಿತ್ತು. ಕರ್ನಾಟಕ ಈ ವಿಚಾರದಲ್ಲಿ ಇಡೀ ದೇಶಕ್ಕೆ ಮಾರ್ಗದರ್ಶಿ ಪಾತ್ರ ವಹಿಸುತ್ತ ಬಂದಿದೆ. ಅಧಿಕಾರ ವಿಕೇಂದ್ರೀಕರಣಕ್ಕೆ ಕರ್ನಾಟಕ ಹಾಕಿದ ಮೊದಲ ಹೆಜ್ಜೆಯನ್ನು ಅನುಸರಿಸಿ ಆಗಿನ ಪ್ರಧಾನಿ ರಾಜೀವಗಾಂಧಿ ಜಿಲ್ಲಾ ಪಂಚಾಯತ್ ವ್ಯವಸ್ಥೆಗೆ ಸಂವಿಧಾನದ ರಕ್ಷಣೆ ಒದಗಿಸಿದರು. ಲೋಕಾಯುಕ್ತ ವ್ಯವಸ್ಥೆ ಜಾರಿಗೆ ತಂದಿದ್ದು ಕರ್ನಾಟಕ. ಮಹಿಳೆಯರಿಗೆ ಮೀಸಲು ಸ್ಥಾನ ಕಲ್ಪಿಸಿಕೊಡುವ ಕೆಲಸವನ್ನು ಮಾಡಿದ್ದೂ ಕರ್ನಾಟಕವೇ. ಹೀಗಿರುವಾಗ ಒಂದೇ ಚುನಾವಣೆಯ ಬಗ್ಗೆ ಮುಕ್ತ ಚರ್ಚೆ ವಿಧಾನಮಂಡಲದಲ್ಲಿ ನಡೆದಿದ್ದರೆ ಚೆನ್ನಾಗಿತ್ತು. ನಮ್ಮ ಜನಪರ ಚಿಂತನೆಗೆ ಇದು ಸಹಕಾರಿಯಾಗುತ್ತಿತ್ತು. ಇದರ ಬಗ್ಗೆ ವಿವಿಧ ರಾಜಕೀಯ ಪಕ್ಷಗಳು ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ. ಜನಹಿತ ಮತ್ತು ಅಭಿವೃದ್ಧಿಪರ ಚಿಂತನೆ ಅಗತ್ಯ. ಈಗ ವರ್ಷವಿಡೀ ಚುನಾವಣೆಗಳು ಒಂದಲ್ಲ ಮತ್ತೊಂದು ಕಡೆ ನಡೆಯುತ್ತಲೇ ಇರುತ್ತವೆ. ಇದರಿಂದ ಚುನಾವಣೆ ನೀತಿ ಸಂಹಿತೆ ಸದಾ ಜಾರಿಯಲ್ಲಿರುತ್ತದೆ. ಹೀಗಾಗಿ ಅಭಿವೃದ್ಧಿ ಕಾಮಗಾರಿಗಳು ತ್ವರಿತಗತಿಯಲ್ಲಿ ನಡೆಯುವುದಿಲ್ಲ. ಅಲ್ಲದೆ ಕೇಂದ್ರ ಮತ್ತು ರಾಜ್ಯದ ಅಭಿವೃದ್ಧಿಯ ಮೇಲೂ ಪರಿಣಾಮ ಆಗೇ ಆಗುತ್ತದೆ. ಕೇಂದ್ರ ಅನುದಾನ ನೀಡಿಲ್ಲ ಎಂದೋ, ರಾಜ್ಯ ಸರ್ಕಾರ ಸಹಕರಿಸುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತದೆ. ಇದಕ್ಕೆ ಪರಿಹಾರ ಈಗ ಲಭ್ಯವಿಲ್ಲ.

5 ವರ್ಷಕ್ಕೊಮ್ಮೆ ಚುನಾವಣೆ ನಡೆದರೂ ಸಮಸ್ಯೆ ಇದೆ. ಹೇಗಿದ್ದರೂ 5 ವರ್ಷ ಸಮಯವಿದೆ ಎಂದು ಜನಪ್ರತಿನಿಧಿಗಳು ನಿರ್ಲಕ್ಷ್ಯ ಮಾಡುವ ಸಂಭವವಿದೆ. ರಾಜ್ಯದಲ್ಲಿ ಎಲ್ಲಾದರೂ ಒಂದು ಕಡೆ ಚುನಾವಣೆ ಇತ್ತು ಎಂದರೆ ಆಡಳಿತದಲ್ಲಿರುವವರು ಎಚ್ಚರವಹಿಸುತ್ತಾರೆ ಎಂಬ ವಾದವೂ ಇದೆ.

ಹಿಂದಿನಿಂದಲೂ ಇದರ ಬಗ್ಗೆ ಚರ್ಚೆ ನಡೆಯುತ್ತ ಬಂದಿದೆ. 1952 ರಲ್ಲಿ 7 ರಾಜ್ಯಗಳಲ್ಲಿ ಏಕಕಾಲಕ್ಕೆ ಚುನಾವಣೆ ನಡೆದಿತ್ತು. 1960 ರಲ್ಲಿ ಇದು ಬದಲಾಯಿತು. 1999 ರಲ್ಲಿ ಕಾನೂನು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಜೀವನ್‌ರೆಡ್ಡಿ ಏಕಕಾಲಕ್ಕೆ ಚುನಾವಣೆ ನಡೆಸಲು ಸೂಚಿಸಿದ್ದರು. 2003 ರಲ್ಲಿ ವಾಜಪೇಯಿ ಮತ್ತು ಸೋನಿಯಾ ಗಾಂಧಿ ಇದರ ಬಗ್ಗೆ ಚರ್ಚೆ ನಡೆಸಿದ್ದರು. 2010 ರಲ್ಲಿ ಎಲ್.ಕೆ. ಆಡ್ವಾಣಿಯವರು ಮನಮೋಹನ್ ಸಿಂಗ್ ಅವರೊಂದಿಗೆ ಮಾತುಕತೆ ನಡೆಸಿದ್ದರು. ರಾಷ್ಟ್ರಪತಿಗಳಾಗಿದ್ದ ಪ್ರಣಬ್ ಮುಖರ್ಜಿ ಮತ್ತು ಕೋವಿಂದ್ ತಮ್ಮ ಭಾಷಣದಲ್ಲಿ ಇದನ್ನು ಪ್ರಸ್ತಾಪಿಸಿದ್ದರು. 2015ರಲ್ಲಿ ಸಂಸದೀಯ ಸಮಿತಿ ಇದನ್ನು ಸೂಚಿಸಿತ್ತು. ನೀತಿ ಆಯೋಗ ಇದರ ಬಗ್ಗೆ ಮುಕ್ತ ಚರ್ಚೆ ನಡೆಯಬೇಕು ಎಂದು ಪ್ರಬಂಧವೊಂದನ್ನು ಪ್ರಕಟಿಸಿತ್ತು. ಕಾನೂನು ಆಯೋಗ 2018 ರಲ್ಲಿ ಜನತಾ ಪ್ರಾತಿನಿಧ್ಯ ಕಾಯ್ದೆ ಮತ್ತು ಸಂವಿಧಾನಕ್ಕೆ ತಿದ್ದುಪಡಿ ತರುವುದು ಅಗತ್ಯ ಎಂದು ಹೇಳಿತ್ತು. ಇದರ ಬಗ್ಗೆ 25 ವೆಬಿನಾರ್‌ಗಳು ನಡೆದಿವೆ. ಒಂದು ವೇಳೆ ಏಕಕಾಲಕ್ಕೆ ಚುನಾವಣೆ ನಡೆಸಬೇಕು ಎಂದರೆ ಸಂವಿಧಾನಕ್ಕೆ ಕೆಲವು ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಮುಖ್ಯವಾಗಿ ಸಂವಿಧಾನದ ವಿಧಿ 83. ಇದರಲ್ಲಿ ಜನಪ್ರತಿನಿಧಿಗಳ ಅವಧಿ ಎಂದಿದೆ. ಇದನ್ನು ಬದಲಿಸಬೇಕು. 85 ನೇ ಲೋಕಸಭೆ ಸದಸ್ಯರ ಅವಧಿಗೆ ಸಂಬಂಧಿಸಿದ್ದು. 172 ನೇ ವಿಧಿ ವಿಧಾನಸಭೆ ಅವಧಿಗೆ ಸಂಬಂಧಿಸಿದ್ದು. 179 ನೇ ವಿಧಿ ವಿಧಾನಸಭೆ ಸದಸ್ಯರ ಕಾಲಾವಧಿಗೆ ಸಂಬಂಧಿಸಿದ್ದು. ಇವುಗಳಿಗೆ ತಿದ್ದುಪಡಿಯಲ್ಲದೆ ಜನತಾ ಪ್ರಾತಿನಿಧ್ಯಕ್ಕೆ ಕಾಯ್ದೆಯಲ್ಲೂ ಬದಲಾವಣೆ ತರಬೇಕು. ಈಗ ಗ್ರಾಮ ಪಂಚಾಯಿತಿಯಿಂದ ಹಿಡಿದು ಜಿಲ್ಲಾ ಪಂಚಾಯಿತಿವರೆಗೆ ರಾಜ್ಯ ಚುನಾವಣೆ ಆಯೋಗ ಚುನಾವಣೆ ನಡೆಸುತ್ತಿದೆ. ಅದೂ ಕೂಡ ಕೇಂದ್ರ ಚುನಾವಣೆ ಆಯೋಗ ಸಿದ್ಧಪಡಿಸಿದ ಮತದಾರರ ಪಟ್ಟಿಯನ್ನು ಬಳಸಬೇಕು. ಒಂದೇ ಬಾರಿ ಚುನಾವಣೆ ನಡೆಸಿದಾಗ ರಾಷ್ಟ್ರೀಯ ಪಕ್ಷಗಳಿಗೆ ಅನುಕೂಲ. ಪ್ರಾದೇಶಿಕ ಪಕ್ಷಗಳಿಗೆ ಅಡ್ಡಿಯಾಗಲಿದೆ ಎಂಬ ಅಭಿಪ್ರಾಯವೂ ಇದೆ. ಇದರ ಬಗ್ಗೆ ಮುಕ್ತ ಚರ್ಚೆ ನಡೆಯಬೇಕು. ಲೋಕಸಭೆ ಕ್ಷೇತ್ರಗಳ ಪುನರ್ ವಿಂಗಡಣೆ ನಡೆದಾಗ ಇದರ ಬಗ್ಗೆ ಚಿಂತನೆ ನಡೆಸಿದ್ದರೆ ಅನುಕೂಲವಾಗುತ್ತಿತ್ತು.